ನಿವೇಶನ ಕೊಂಡ್ಕೊಂಡಿದೀವಿ ಅಂತಾ ಮೀಸೆ ತೀಡ್ತಾ ಇದಾರೆ. ಮೇಲಿಂದ ಮೇಲೆ ನನ್ನಲ್ಲಿಗೆ ಬಂದು ವೈವಿಧ್ಯಮಯ ಅಧ್ಯಯನ ನಡೆಸ್ತಾ ಇದಾರೆ. ನನ್ನಲ್ಲಿರೋ ಅಮೂಲ್ಯ ಖನಿಜಗಳನ್ನು ಕಚ್ಚಾ ವಸ್ತುಗಳನ್ನು ಕಬಳಿಸೋ ಹುನ್ನಾರ ನಡೀತಿದೆ. ಇದನ್ನೆಲ್ಲಾ ನೋಡ್ತಾ ಇದ್ರೆ ಭೂಮಿಗೆ ಬಂದಿರೋ ಗತಿ ನಮಗೂ ಬರಬಹುದೇನೋ ಎನ್ನುವ ಅವ್ಯಕ್ತ ಭಯ ಕಾಡ್ತಿದೆ. ಆಗಸದಲ್ಲೂ ಕಸ, ತ್ಯಾಜ್ಯ ತುಂಬಿದೆ ಅಂತಾ ಮೊನ್ನೆ ಪತ್ರಿಕೇಲಿ ಓದಿದೆ. ಭೂಮಿಯನ್ನೂ ಆಕಾಶವನ್ನೂ ನಿರ್ನಾಮ ಮಾಡ್ತಿರೋ ಮಾನವನನ್ನೇ, ಭೂಮಿಯಿಂದ ನಿರ್ನಾಮ ಮಾಡಿಬಿಡೋಣ ಅನ್ನುವಷ್ಟು ಕಡುಕೋಪದಿಂದ ಕುದಿಯುತ್ತಿದ್ದೇನೆ ಸೂರ್ಯಣ್ಣ.

ಹೌದು ಚಂದ್ರಣ್ಣ, ಮೊನ್ನೆ ನನ್ನ ಬಗ್ಗೆನೂ ದೂರದಿಂದಲೆ ಅಧ್ಯಯನ ಮಾಡ್ಬೇಕು ಅಂತ ಬಂದಿದ್ರಂತೆ! ಹತ್ತಿರ ಸುಳಿದರೆ ಸುಟ್ಟು ಬೂದಿ ಆಗುತ್ತಾರೆ ಎನ್ನುವುದನ್ನು ಅರಿತೂ ನನ್ನ ಬಗ್ಗೆ ಅಧ್ಯಯನ ಮಾಡೋ ಮಾನವನ ದುಸ್ಸಾಹಸ ಕಂಡು ಅವಕ್ಕಾದೆ!

ಹಾಂ... ನೋಡು ಸೂರ್ಯಣ್ಣ ಅದಕ್ಕೆ ಹೇಳಿದ್ದು. ಸ್ವರ್ಗದಂತೆ ಸುಂದರವಾಗಿದ್ದ ಭೂಮಿಯನ್ನು ನರಕವಾಗಿಸಿ, ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣ ಮಾಡಿ, ಸಕಲ ಜೀವರಾಶಿಗಳು ಬದುಕಲಾರದಂತಹ ಬಿಕ್ಕಟ್ಟು ಸೃಷ್ಟಿಸಿ, ಈಗ ಅನ್ಯಗ್ರಹದಲ್ಲಿ ವಾಸ ಮಾಡ್ತೀನಿ ಅಂತ ಹೊರಟಿರೋ ಮೂರ್ಖ ಮಾನವನಿಗೇ ಏನನ್ನೋಣ? ಸಕಲ ಜೀವಜಾಲ ಬೆಳೀಲಿ ಅಂತ ಬಿಸಿಲನ್ನು ನೀಡುತ್ತಿರುವೆ. ನಾನು ಎಲ್ಲರೂ ಸುಖವಾಗಿರಲಿ ಎಂದು ರಾತ್ರಿಯಲ್ಲಿ ತಂಪನ್ನು ನೀಡುತ್ತಿರುವೆ. ಇಬ್ಬರೂ ಎರಡು ಕಣ್ಣಾಗಿ ಭೂಮಂಡಲವನ್ನು ಕಾಪಾಡ್ತಾ ಇದೀವಿ. ನಮ್ಮ ಕೆಲಸವೇ ಇವರನ್ನು ಕಾಪಾಡೋದು. ಭೂಮಂಡಲವನ್ನು ಹಂತ ಹಂತವಾಗಿ ಮಲಿನ ಮಾಡುವುದನ್ನು, ನಾಶ ಮಾಡುವುದನ್ನು, ಪ್ರಕೃತಿ ಮೇಲಿನ ದಬ್ಬಾಳಿಕೆಯನ್ನು ನಾವು ಪರೋಕ್ಷವಾಗಿ ಭೂಕಂಪ, ಮೇಘಸ್ಫೋಟ, ನೆರೆ, ಬರ, ಉರಿಬಿಸಿಲು, ಮರಗಟ್ಟಿಸುವ ಚಳಿ, ಸುನಾಮಿ, ಬಿರುಗಾಳಿ, ಭೂಕುಸಿತದ ಮೂಲಕ ಎಚ್ಚರಿಸಿದರೂ ಎಚ್ಚೆತ್ತುಕೊಳ್ಳದ ಮಾನವ ಬುದ್ಧಿ ಕಲಿಯಲಾರ ಸೂರ್ಯಣ್ಣ.

ಹಾಗಾಗಿ ನಾವಿಬ್ಬರೂ ಹುಷಾರಾಗಿರಬೇಕು. ನಮ್ಮಲ್ಲಿರುವ ವಿರಳಾತಿವಿರಳ ಅಪಾರ ಸಂಪತ್ತನ್ನು ಮಾನವನ ಕಣ್ಣಿಗೆ ಬೀಳದಂತೆ ಅಡಗಿಸಿಡೋಣ. ನೀನು ನಿನ್ನಲ್ಲಿರುವ ತೀವ್ರ ತಾಪಮಾನದಿಂದ ಮಾನವ ನಿನ್ನಲ್ಲಿಗೆ ಬರುವುದನ್ನು ತಡೆ. ನಾನು ನನ್ನಲ್ಲಿರುವ ಸಹಿಸಲಸಾಧ್ಯವಾದ ಚಳಿಯಿಂದ ಮಾನವನನ್ನು ದೂರವಿಡುತ್ತೇನೆ.

ಗುಡ್ ಬೈ ಸೂರ್ಯಣ್ಣ.

ಓಕೆ ಸಿಯು ಚಂದ್ರಣ್ಣ. ■

## ಕುಂಚ ಪ್ರಪಂಚ





**ಜ್ಯೋತ್ಸ್ನಾ ಸಿಂದಗಿ**
3ನೇ ತರಗತಿ,
ಪ್ರೆಸಿಡೆನ್ಸಿ ಸ್ಕೂಲ್,
ಆರ್.ಟಿ. ನಗರ, ಬೆಂಗಳೂರು





**ಅಮೃತಲಕ್ಷ್ಮಿ**
4ನೇ ತರಗತಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬ್ರಹ್ಮಾವರ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in






**ದಿಶಾ ಎಚ್.**
7ನೇ ತರಗತಿ,
ಬಿಇಎಸ್ ಸ್ಕೂಲ್,
ಮಲ್ಲೇಶ್ವರ, ಬೆಂಗಳೂರು